ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಸಿ.ಎಂ. ಪ್ರತಿವಾದಿಗಳ ಪರ ವಕೀಲರಿಂದಃ</u>

ದಾವಾ ದ para no. 5 ರಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿ 1 ರವರ ಜಮೀನಿನಲ್ಲಿ ರಸ್ತೆ ಇದೆ ಎಂದರೆ ಸರಿ. ನನ್ನ ವಾದ ಪತ್ರದ Para No.7 ರಲ್ಲಿ ನಾವು ಮೀರ್ ನಬಿ ಅಲಿ ರವರಿಂದ ಸ್ವತ್ತನ್ನು ಖರೀದಿ ಮಾಡಿಲ್ಲವೆಂದರೆ ಸರಿಯಲ್ಲ. ನನ್ನ ವಾದ ಪತ್ರದ para No.7 ರಲ್ಲಿ ಹೇಳಿದ ಹಾಗೇ ಪೂರ್ವ-ಪಶ್ಚಿಮ ವಿಸ್ತೀರ್ಣ 145 ಅಡಿಗಳು, ಉತ್ತರ-ದಕ್ಷಿಣ 58 ಅಡಿಗಳು ಸರ್ವೆ ನಂ. 29/2 ಎ ಸ್ವತ್ತು ಇಲ್ಲವೆಂದರೆ ಸರಿಯಲ್ಲ. ಸರ್ವೆ ನಂ. 29/2 ಎ ಸ್ವತ್ತಿನ ಚಕ್ಕೆಬಂದು ಪೂರ್ವಕ್ಕೆ ಗಂಗಪ್ಪ ಜಮೀನು, ಪಶ್ಚಿಮಕ್ಕೆ ನಾಗರಾಜಪ್ಪ ರವರ ಜಮೀನು, ಉತ್ತರಕ್ಕೆ ಸರ್ಕಾರಿ ಜಮೀನು, ದಕ್ಷಿಣಕ್ಕೆ ಗಂಗಪ್ಪ ರವರ ಜಮೀನು ಮತ್ತು ರಸ್ತೆ. ಪ್ರತಿವಾದಿಗಳು ನಾನು ಹೇಳಿದ ಹಾಗೇ ಚೆಕ್ಕುಬಂದಿಯಲ್ಲಿ ಇಲ್ಲ ಎಂದರೆ ಗಂಗಪ್ಪ ರವರ ಜಮೀನಿನಲ್ಲಿ ಇದ್ದಾರೆ. 1 ನೇ ಪ್ರತಿವಾದಿ ಗಂಗಪ್ಪ ರವರ ಜಮೀನಿನಲ್ಲಿ ಇದ್ದಾರೆ ಎಂದರೆ ಸರಿ. Para No.7 ರಲ್ಲಿ ಹೇಳಿರುವ ಚೆಕ್ಕುಬಂದಿ ನನ್ನ ಜಮೀನ್ನದ್ದು. ಪೂರ್ವಕ್ಕೆ ಪ್ರತಿವಾದಿಗಳ ಜಮೀನಿ ಇದೆ ಎಂದು ತೋರಿಸಲು ಸರ್ಕಾರಿ ದಾಖಲಾತಿಗಳನ್ನು ಹಾಜರು ಮಾಡಿದ್ದೀರಾ ಎಂದರೆ ಗಂಗಪ್ಪ ರವರ ಜಮೀನಿನ ಪಕ್ಕದಲ್ಲೇ ನಮ್ಮ ಜಮೀನು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದ ನಿಪಿ-1 ಅನ್ನು ಹಾಜರು ಪಡಿಸಿರುತ್ತೇನೆ. ನಿಪಿ-1 ರಲ್ಲಿ ಹೇಳಿರುವ ಚೆಕ್ಕುಬಂದಿ ಸುಳ್ಳು ಎಂದರೆ ಸರಿಯಲ್ಲ. ದಿಃ 04.06.1988 ರಂದು ಮೀರ್ ನಬಿ ಆಲಿ ರವರಿಂದ ದಾವಾ ಸ್ವತ್ತನ್ನು ಖರೀದಿ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಜಮೀನಲ್ಲಿ ಓಡಾಡಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ತೊಂದರೆ ನೀಡಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ದಾರಿ ಇದೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಅನ್ನು ಹೊರತು ಪ್ರತಿವಾದಿಗಳ ಜಮೀನಿನಲ್ಲಿ ದಾರಿ ಇದೆ ಎಂದು ತೋರಿಸಲು ಯಾವ ದಾಖಲಾತಿಗಳನ್ನು ಹಾಜರು ಪಡಿಸಿಲ್ಲವೆಂದರೆ ನಕ್ಷೆಯನ್ನು ಹಾಜರು ಪಡಿಸಿರುತ್ತೇನೆ.

ನಾನು ನನ್ನ ಜಮೀನಿನಲ್ಲಿ ಮನೆ ಇದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ನಾನು ನಕ್ಷೆಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಜಮೀನಿನಲ್ಲಿ ಮನೆ ಇಲ್ಲ ಪ್ರತಿವಾದಿಗಳ ಜಮೀನಿನನ್ನು ಕಬಳಿಸಲು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಹೆ.ಸಿ.ನ್ಯಾಮತ್ತು ಜೆಎಂಎಫ್‌ಸಿ,
ಗೌರಿಬಿದನೂರು